# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 824(813) |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಂ.ರಮೇಶಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20-09-2021 |
| ಉತ್ತರಿಸುವವರು | : | ಅರಣ್ಯ, ಆಹಾರ, ನಾಗರಿಕ ಸರಬರಾಜು<br>ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಭಯಾರಣ್ಯಗಳು ಹಾಗೂ ಸಂರಕ್ಷಿತಾರಣ್ಯಗಳ ಉಳಿವಿಕೆಗೆ ಸರ್ಕಾರ ಯಾವ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ; (ವಿವರ ನೀಡುವುದು). | ಅಭಯಾರಣ್ಯಗಳು ಹಾಗೂ ಸಂರಕ್ಷಿತಾರಣ್ಯಗಳ ಉಳಿವಿಕೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ಅರಣ್ಯಗಳ ಉಳುವಿಕೆಗಾಗಿ ಗಡಿಗಳನ್ನು ಗುರುತಿಸಲು ಮೋಜಣಿ ಮಾಡಿ ಕಲ್ಲುಕಂಬಗಳನ್ನು ನಡಲಾಗುತ್ತದೆ.<br>2. ರಾಜ್ಯದ ಇತರೆ ನಗರ, ಪಟ್ಟಣ ಪ್ರದೇಶಗಳ ಅಂಚಿನಲ್ಲಿರುವ ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಹಾಗೂ ಇತರೆ ಬೆಲೆ ಬಾಳುವ ರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಆಗುತ್ತಿರುವ ಒತ್ತುವರಿ, ಅತಿಕ್ರಮಣವನ್ನು ನಿಯಂತ್ರಿಸುವ ಸಲುವಾಗಿ ಕಾಂಪೌಂಡ್‌ವಾಲ್, ಚೈನ್‌ಲಿಂಕ್ ಮೆಶ್, ಜಾನುವಾರು ನಿರೋಧಕ ಕಂದಕ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಈ ಯೋಜನೆಗಳು ಅತ್ಯಾವಶ್ಯಕತೆಯಿಂದ ಕೂಡಿದ್ದು, ಒತ್ತುವರಿಯನ್ನು ತೆರವು ಗೊಳಿಸಿ ಸರ್ಕಾರಿ ಜಮೀನುಗಳನ್ನು ಉಳಿಸುವ ನಿಟ್ಟಿನಲ್ಲಿ ಹೆಚ್ಚಿನ ನಿಗಾ ವಹಿಸಲಾಗುತ್ತಿದೆ.<br>3. ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಬೆಂಕಿ ರೇಖೆಗಳ ನಿರ್ಮಾಣ, ಹಳೆಯ ಬೆಂಕಿ ರೇಖೆಗಳನ್ನು ಹಾಗೂ ಡಿ ಲೈನ್‌ಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಇದರಿಂದಾಗಿ ಕಾಡ್ಗಿಚ್ಚಿನಿಂದ ಸಂಭವಿಸಬಹುದಾದ ಹಾನಿಯು ಬಹುತೇಕ ಕಡಿಮೆಯಾಗುತ್ತದೆ.<br>4. ಅರಣ್ಯ ಇಲಾಖೆಯಲ್ಲಿ ಶುಲ್ಕ ರಹಿತ ಅರಣ್ಯ ಸಹಾಯವಾಣಿ 1926 ದಿನದ 24 ಗಂಟೆಯು ಕಾರ್ಯನಿರತವಾಗಿದ್ದು ಸಾರ್ವಜನಿಕರಿಂದ ಅರಣ್ಯ ಬೆಂಕಿ ಪ್ರಕರಣಗಳ ಬಗ್ಗೆ ಮಾಹಿತಿ ಸ್ವೀಕೃತವಾದಲ್ಲಿ ಸಂಬಂಧಿಸಿದ ಕ್ಷೇತ್ರಾಧಿಕಾರಿಗಳಿಗೆ ಮಾಹಿತಿಯನ್ನು ಸಕಾಲದಲ್ಲಿ ರವಾನಿಸಿ ಅರಣ್ಯ ಬೆಂಕಿಯನ್ನು ನಿಯಂತ್ರಿಸುವಲ್ಲಿ ತುರ್ತ ಕ್ರಮ ಕೈಗೊಳ್ಳಲಾಗುತ್ತದೆ. |

...2

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 5. ಅರಣ್ಯ ಬೆಂಕಿಯನ್ನು ನಂದಿಸಲು ಇಲಾಖಾ ಸಿಬ್ಬಂದಿಯೊಂದಿಗೆ ಸ್ಥಳೀಯ ಗ್ರಾಮಸ್ಥರು ಹಾಗೂ ಬುಡಕಟ್ಟು ಜನಾಂಗದವರನ್ನು ಒಳಗೊಂಡಂತೆ ತಂಡಗಳನ್ನು ರಚಿಸಲಾಗಿರುತ್ತದೆ.<br>6. ಅರಣ್ಯ ಬೆಂಕಿಗಳನ್ನು ನಿಯಂತ್ರಿಸಲು ಆಧುನಿಕ ಉಪಕರಣಗಳನ್ನು, ಶಿರಸ್ತ್ರಾಣ, ಸಮವಸ್ತ್ರಗಳನ್ನು ಬೆಂಕಿ ಕಾವಲುಗಾರರಿಗೆ ಹಾಗೂ ಬೆಂಕಿ ಸಂರಕ್ಷಣಾ ಪಡೆಗಳಿಗೆ ಒದಗಿಸಲಾಗುತ್ತದೆ.<br>7. ಅವಶ್ಯವಿದ್ದ ಸಂದರ್ಭಗಳಲ್ಲಿ ಅಗ್ನಿಶಾಮಕ ದಳದ ನೆರವನ್ನು ಸಹ ಪಡೆದುಕೊಂಡು ಅರಣ್ಯ ಬೆಂಕಿಗಳನ್ನು ಸಮರ್ಪಕವಾಗಿ ನಿಯಂತ್ರಿಸಿ ಶಮನಗೊಳಿಸಲಾಗುತ್ತದೆ.<br>8. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ 5 ರಾಷ್ಟ್ರೀಯ ಉದ್ಯಾನವನಗಳು ಹಾಗೂ 33 ಅಭಯಾರಣ್ಯಗಳನ್ನು, 5 ಹುಲಿ ಮೀಸಲು ಅರಣ್ಯ, 14 ಸಂರಕ್ಷಿತ ಅರಣ್ಯ ಹಾಗೂ 1 ಸಮುದಾಯ ಮೀಸಲು ಎಂದು ಘೋಷಿಸಲಾಗಿದೆ.<br>9. ವನ್ಯಜೀವಿಗಳಿಗೆ ರಕ್ಷಣೆ ನೀಡಲು ಇನ್ನೂ ಕೆಲವು ಪ್ರದೇಶಗಳನ್ನು ಸಂರಕ್ಷಿತ ಪ್ರದೇಶಗಳೆಂದು ಘೋಷಿಸಲು ಪ್ರಸ್ತಾಪಿಸಲಾಗಿದೆ.<br>10. ಆವಾಸಸ್ಥಾನ ಸುಧಾರಣೆ, ಜಲಮೂಲಗಳ ವರ್ಧನೆ ಮತ್ತು ಮೇವಿನ ಅಭಿವೃದ್ಧಿಯನ್ನು ನಿಯಮಿತವಾಗಿ ತೆಗೆದುಕೊಳ್ಳಲಾಗುತ್ತಿದೆ.<br>11. ಅರಣ್ಯ ಪ್ರದೇಶಗಳಲ್ಲಿ ವನ್ಯಪ್ರಾಣಿಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು, ಗಲ್ಲಿಚೆಕ್, ಚೆಕ್‌ಡ್ಯಾಮ್, ನಾಲಾಬಂಡ್, ಸೌರಬೇಲಿ, ಆನೆ ತಡೆ ಕಂದಕ ಇತ್ಯಾದಿ ಕೆಲಸಗಳನ್ನು ಸಹ ರಕ್ಷಿತಾರಣ್ಯಗಳಲ್ಲಿ ತೆಗೆದು ಕೊಳ್ಳಲಾಗಿದೆ.<br>12. ರಕ್ಷಿತ ಅರಣ್ಯಗಳ ಸೂಕ್ಷ್ಮ ಪ್ರದೇಶಗಳಲ್ಲಿ ಕಳ್ಳಬೇಟೆ ತಡೆ ಶಿಬಿರಗಳನ್ನು ರಚಿಸಿ ಅರಣ್ಯ ಮತ್ತು ವನ್ಯಜೀವಿಗಳಿಗೆ ರಕ್ಷಣೆ ನೀಡಲಾಗುತ್ತಿದೆ.<br>13. ರಕ್ಷಣಾ ಚಟುವಟಿಕೆಗಳ ನಿಯಮಿತ ಮೇಲ್ವಿಚಾರಣೆ ಮಾಡಲಾಗುತ್ತಿದೆ.<br>14. ಕಾಡಿನ ಬೆಂಕಿಯಿಂದ ಸಸ್ಯ ಮತ್ತು ಪ್ರಾಣಿಗಳನ್ನು ರಕ್ಷಿಸಲು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br>15. ಮಾನವ-ಪ್ರಾಣಿ ಸಂಘರ್ಷ ತಗ್ಗಿಸುವಿಕೆಯ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. |

....3

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಅರಣ್ಯ ಇಲಾಖೆಯಲ್ಲಿ ಇನ್ನೂ ಬಾಕಿ ಇರುವ ಫಾರೆಸ್ಟ್ ಗಾರ್ಡ್, ವಾಚರ್ ಹಾಗೂ ಇನ್ನುಳಿದ ಅರಣ್ಯ ಸಂರಕ್ಷಕರ ನೇಮಕಾತಿ ಪ್ರಕ್ರಿಯೆ ಸದ್ಯ ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು). | ಅರಣ್ಯ ಇಲಾಖೆಯಲ್ಲಿ ಅರಣ್ಯ ರಕ್ಷಕ, ಅರಣ್ಯ ವೀಕ್ಷಕ ಹಾಗೂ ಇನ್ನುಳಿದ ಮುಂಚೂಣಿ ಕಾರ್ಯನಿರ್ವಾಹಕ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನಿಯತಕಾಲಿಕವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಪ್ರಸ್ತುತ 339 ಅರಣ್ಯ ರಕ್ಷಕ ಹುದ್ದೆಗಳ ನೇಮಕಾತಿಗಾಗಿ ದಿನಾಂಕ 02.03.2021 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br><br>ಅರಣ್ಯ ವೀಕ್ಷಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಆರ್ಥಿಕ ಇಲಾಖೆಯ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಅನುಮೋದನೆ ದೊರೆತ ನಂತರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು. |
| ಇ) | ಕರ್ನಾಟಕದ ದಟ್ಟ ಅರಣ್ಯಗಳಾದ ಬಂಡೀಪುರ, ನಾಗರಹೊಳೆ, ದಾಂಡೇಲಿ ಮುಂತಾದ ಕಡೆ ವನ್ಯಜೀವಿಗಳ ಚಿಕಿತ್ಸೆಗೆ ಸುಸಜ್ಜಿತ ವೈದ್ಯಕೀಯ ಘಟಕ ಸ್ಥಾಪನೆಯ ಬಗ್ಗೆ ಸರ್ಕಾರ ಚಿಂತಿಸಿದೆಯೇ; (ಮಾಹಿತಿ ನೀಡುವುದು) | ರಾಜ್ಯದ ಸಂರಕ್ಷಿತ ಹಾಗೂ ಅರಣ್ಯ ಪ್ರದೇಶಗಳಲ್ಲಿ ವನ್ಯಪ್ರಾಣಿಗಳ ಚಿಕಿತ್ಸೆಗಾಗಿ ನಿಯೋಜನೆ ಮೇರೆಗೆ ಐದು ಜನ ಪಶುವೈದ್ಯಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು ಸದರಿ ಪಶುವೈದ್ಯಾಧಿಕಾರಿಗಳಿಂದ ತುರ್ತು ಸಂದರ್ಭಗಳಲ್ಲಿ ವನ್ಯಪ್ರಾಣಿಗಳಿಗೆ ಸೂಕ್ತ ಪ್ರಥಮ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಅವಶ್ಯವಿದ್ದಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧೀನದಲ್ಲಿ ಬರುವ ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಿ ಸೂಕ್ತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ರಾಜ್ಯದ ನಾನಾ ಪ್ರದೇಶಗಳ ಕಿರು ಅರಣ್ಯಗಳು ಹಾಗೂ ಸಾಮಾಜಿಕ ಅರಣ್ಯಗಳ ನಿರ್ಮಾಣ, ನಿರ್ವಹಣೆ ಹಾಗೂ ಸದ್ಯದ ಸ್ಥಿತಿಗತಿಗಳೇನು; (ವಿವರ ನೀಡುವುದು) | ರಾಜ್ಯದ ಸಾಮಾಜಿಕ ಅರಣ್ಯ ವಿಭಾಗಗಳಡಿ ಜಿಲ್ಲಾ ವಲಯ ಅನುದಾನಗಳನ್ನು ಸಮರ್ಪಕವಾಗಿ ವಿವಿಧ ಅರಣ್ಯೀಕರಣ ಚಟುವಟಿಕೆಗಳಾದ ರಸ್ತೆ ನೆಡುತೋಪು, ಸರ್ಕಾರಿ ಅರಣ್ಯೇತರ ಪ್ರದೇಶಗಳಲ್ಲಿ ಬ್ಲಾಕ್ ನೆಡುತೋಪು, ಸ್ಮಶಾನ, ಸಂಸ್ಥೆಗಳ ಪ್ರದೇಶಗಳಲ್ಲಿ ನಿಗದಿಪಡಿಸಿದ ಗುರಿಗಳಂತೆ ನಿರ್ಮಾಣ ಮಾಡಿ ಇಲಾಖೆಯ ನಿಯಮಗಳಂತೆ 2-3 ವರ್ಷಗಳ ಕಾಲ ನಿರ್ವಹಣೆ ಮಾಡಲಾಗುತ್ತಿದೆ. ಇವುಗಳ ಸದ್ಯದ ಸ್ಥಿತಿಯು ನಿರ್ಮಾಣಗೊಂಡ ಸಾಲಿನಲ್ಲಿ 90-95% 2ನೇ ವರ್ಷದ ನಿರ್ವಹಣಾ ವರ್ಷದಲ್ಲಿ ಸುಮಾರು 80-90% ಹಾಗೂ 3ನೇ ವರ್ಷದ ನಿರ್ವಹಣಾ ಪ್ರದೇಶದಲ್ಲಿ 75-85% ರವರೆಗೆ ನೆಡುತೋಪುಗಳು ಸುಸ್ಥಿತಿಯಲ್ಲಿ ಇರುತ್ತವೆ. |

......4

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯಡಿ ರೈತರ ಜಮೀನುಗಳಲ್ಲಿ ಬಿದಿರು ನೆಡುತೋಪುಗಳನ್ನು ಬೆಳೆಸಲು ಹಾಗೂ ಹಸಿರು ಕವಚ ಹೆಚ್ಚಿಸುವ ಸಲುವಾಗಿ ರೈತರಿಗೆ ಅನುಕೂಲವಾಗುವಂತಹ ಬಿದಿರು ಸಸಿಗಳಾದ ಮಾರಿಹಾಳ ಮತ್ತು ಟುಲ್ಡಾ ಜಾತಿಯ ಸಸಿಗಳನ್ನು ಬೆಳೆಸಿ ನೆಡುತೋಪು ನಿರ್ಮಾಣ ಮಾಡಲು ಅವರನ್ನು ಪ್ರೇರೇಪಿಸಲಾಗುತ್ತಿದೆ. 2019-20 ಮತ್ತು 2020-21ನೇ ಸಾಲಿನಲ್ಲಿ ಸಾಮಾಜಿಕ ಅರಣ್ಯ ವಿಭಾಗ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ರೈತರ ಜಮೀನುಗಳಲ್ಲಿ ಬೆಳೆಸಲಾದ ನೆಡುತೋಪುಗಳ ವಿವರ ಈ ಕೆಳಕಂಡಂತಿದೆ.<br><br>**ಕ್ರಸಂ** \| **ವರ್ಷ** \| **ಬೆಳೆಸಲಾದ ಬಿದಿರು ನೆಡುತೋಪಿನ ವಿಸ್ತೀರ್ಣ**<br>1 \| 2019-20 \| 239 Ha<br>2 \| 2020-21 \| 927 Ha<br><br>ರಾಷ್ಟ್ರೀಯ ಬಿದಿರು ಮಿಷನ್ ಯೋಜನೆಯ ಮಾರ್ಗಸೂಚಿಯನುಸಾರ ಮೇಲ್ಕಂಡ ನೆಡುತೋಪುಗಳ ನಿರ್ವಹಣೆಗೆ ಎರಡು ವರ್ಷಗಳ ಕಾಲ ನಿರ್ವಹಣಾ ವೆಚ್ಚವನ್ನು ನೀಡಲಾಗುತ್ತಿದೆ. |

ಸಂಖ್ಯೆ: ಅಪಜೀ 181 ಎಫ್‌ಡಬ್ಲ್ಯೂಎಲ್ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು